| | |
|---|---|
| **Headline:** Cost is in favour of exchange traded funds: SEBI | |
| **Source:** Prajavani | **Date:** 26 October 2015 |

### ಬೇಳೆಕಾಳು ಧಾರಣೆ ಏರಿಕೆ; ಸೆಬಿ ಪರಿಶೀಲನೆ

# ನಿಯಮ ಉಲ್ಲಂಘಿಸಿದರೆ ಕ್ರಮ: ಸಿನ್ಹಾ

ಮುಂಬೈ (ಪಿಟಿಐ): 'ಬೇಳೆಕಾಳುಗಳ ಧಾರಣೆ ಏರಿಕೆಯಲ್ಲಿ ವರ್ತಕರ ಪಾತ್ರವಿದೆಯೇ ಎಂದು ಪರಿಶೀಲನೆ ನಡೆಸಲಾಗುತ್ತಿದೆ. ಒಂದೊಮ್ಮೆ ಅಗತ್ಯ ವಸ್ತುಗಳ ಕಾಯ್ದೆ ಉಲ್ಲಂಘಿಸಿರುವುದು ತಿಳಿದುಬಂದರೆ ಅಂತಹ ವರ್ತಕರ ವಿರುದ್ಧ ಕ್ರಮ ಜರುಗಿಸಲಾಗುವುದು ಎಂದು ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿ (ಸೆಬಿ) ಅಧ್ಯಕ್ಷ ಯು.ಕೆ.ಸಿನ್ಹಾ ಹೇಳಿದ್ದಾರೆ.

ಬೇಳೆಕಾಳು ಧಾರಣೆ ನಿಯಂತ್ರಿಸಲು 13 ರಾಜ್ಯಗಳಲ್ಲಿ ಅಕ್ರಮ ದಾಸ್ತಾನು ಕೇಂದ್ರಗಳ ಮೇಲೆ ದಾಳಿ ನಡೆಸಿ 7.50 ಲಕ್ಷ ಕ್ವಿಂಟಲ್‌ಗೂ ಅಧಿಕ ಪ್ರಮಾಣದ ಬೇಳೆಕಾಳುಗಳನ್ನು ಜಪ್ತಿ ಮಾಡಲಾಗಿದೆ.

ರಾಷ್ಟ್ರೀಯ ಷೇರುಪೇಟೆ (ಎನ್‌ಎಸ್‌ಇ) ಸೋಮವಾರ ಆಯೋಜಿಸಿದ್ದ 'ಇಟಿಎಫ್' ವಿಚಾರ ಸಂಕಿರಣದ ಬಳಿಕ ಬೇಳೆಕಾಳು ಧಾರಣೆ ಏರಿಕೆ ಮತ್ತು ಅಕ್ರಮ ದಾಸ್ತಾನು ಮೇಲೆ ದಾಳಿ ನಡೆಯುತ್ತಿರುವ ಬಗ್ಗೆ ಸಿನ್ಹಾ ಅವರು ಇಲ್ಲಿ ಸುದ್ದಿಗಾರರಿಗೆ ಪ್ರತಿಕ್ರಿಯೆ ನೀಡಿದರು.

ಸರ್ಕಾರದ ಜತೆ ನಿರಂತರ ಸಂಪರ್ಕದಲ್ಲಿದ್ದು, ಪರಿಸ್ಥಿತಿಯನ್ನು ಗಮನಿಸುತ್ತಿದ್ದೇವೆ ಎಂದರು.

ವಾಯಿದಾ ವಹಿವಾಟು ಆಯೋಗ (ಎಫ್‌ಎಂಸಿ) ಮತ್ತು ಸೆಬಿ ವಿಲೀನಗೊಂಡಿದೆ. ಹೀಗಾಗಿ ಸರಕು ಮಾರುಕಟ್ಟೆ ನಿಯಂತ್ರಣವೂ ಸೆಬಿಗೆ ಸೇರಿದೆ.